

# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಸಂಪಾದಕ : ಮಂಜು ಬನವಾಸೆ

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 169 | Pages. 2 | Date: 10-05-2025, SATURDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 169 - ಪುಟಗಳು : 2 - 10 ಮೇ 2025 ಶನಿವಾರ Ph: 8762954248 ದರ : ₹1


# ಯುದ್ಧ ಕಾರ್ಮೋಡ: ರೈಲ್ವೆ ನಿಲ್ದಾಣಗಳಲ್ಲಿ ಬಿಗಿ ತಪಾಸಣೆ

## ಪ್ರಯಾಣಿಕರ ಮೇಲೆ ಹದ್ದಿನ ಕಣ್ಣು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಪಹಲ್ಗಾಮ್ ದಾಳಿ ಬಳಿಕ ಪಾಕಿಸ್ತಾನ ಮತ್ತು ಭಾರತ ನಡುವೆ ಯುದ್ಧ ಕಾರ್ಮೋಡ ಕವಿದಿದ್ದು ಜಿಲ್ಲೆಯಲ್ಲಿ ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಾಗಿದೆ. ಮತ್ತೊಂದೆಡೆ ಸಂದಿಗ್ಧ ಪರಿಸ್ಥಿತಿಯಲ್ಲಿ ಭಾರತೀಯ ಸೇನೆ ವಿಜಯ ಸಾಧಿಸಲಿ ಎಂದು ಶುಕ್ರವಾರ ಮುಸ್ಲಿಂ ಬಾಂಧವರು ವಿಶೇಷ ಪ್ರಾರ್ಥನೆ ಸಲ್ಲಿಸಿದ್ದಾರೆ.

ಜನದಟ್ಟಣೆ ಹೆಚ್ಚಿರುವ ಹಾಸನ, ಅರಸೀಕೆರೆ, ಹೊಳೆನರಸೀಪುರ ರೈಲ್ವೆ ನಿಲ್ದಾಣಗಳಲ್ಲಿ ಆರ್‌ಪಿಎಫ್ ಸಿಬ್ಬಂದಿ ಸೂಕ್ಷ್ಮ ತಪಾಸಣೆ ನಡೆಸುತ್ತಿದ್ದಾರೆ. ಪ್ರಯಾಣಿಕರ ನಿರ್ಗಮನ ಹಾಗೂ ಪ್ರವೇಶ ಮೆಟಲ್ ಡಿಟೆಕ್ಟರ್ ಮೂಲಕವೇ ನಡೆಯುತ್ತಿದೆ. ಹಾಸನದ ರೈಲ್ವೆ ನಿಲ್ದಾಣದಲ್ಲಿ ಸಿಸಿಟಿವಿ ಕ್ಯಾಮರಗಳ ಮೇಲೆ ಸಿಬ್ಬಂದಿ ನಿಗಾ ಇಟ್ಟಿದ್ದು ಪ್ರತಿ ಪ್ರಯಾಣಿಕರನ್ನು ಪರಿಶೀಲಿಸಲಾಗುತ್ತಿದೆ. ಸಂಶಯಾಸ್ಪದ ವಸ್ತುಗಳು ಕಂಡುಬಂದರೆ ಪರಿಶೀಲನೆಗೆ ಒಳಪಡಿಸಲಾಗುತ್ತಿದೆ. ಪ್ರಯಾಣಿಕರ ಲಗ್ಗೇಜ್ ಬ್ಯಾಗ್ ಹಾಗು ಟಿಕೆಟ್ ಅನ್ನು ರೈಲ್ವೆ



ಸಿಬ್ಬಂದಿ ತಪಾಸಣೆಗೆ ಒಳಪಡಿಸುತ್ತಿದ್ದಾರೆ.

ಜಿಲ್ಲೆಯ ಎಲ್ಲಾ ರೈಲು ನಿಲ್ದಾಣಗಳಲ್ಲಿ ರೈಲ್ವೆ ಪ್ರೊಟೆಕ್ಷನ್ ಫೋರ್ಸ್ ಸಕ್ರಿಯವಾಗಿದೆ. ಈ ಬಗ್ಗೆ ಕೇಂದ್ರ ಸರ್ಕಾರದಿಂದ ಸೂಚನೆ ಬಂದಿರುವ ಹಿನ್ನೆಲೆಯಲ್ಲಿ ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ. ಅನಾಮಧೇಯ ವ್ಯಕ್ತಿಗಳು, ಟಿಕೆಟ್ ಇಲ್ಲದೆ ಪ್ರಯಾಣಿಸುವವರು ಕಂಡುಬಂದರೆ ಅಂತವರ ಪೂರ್ವಾಪರ ವಿಚಾರಣೆಯಲ್ಲಿ ಆರ್‌ಪಿಎಫ್ ಸಿಬ್ಬಂದಿ ನಿರತರಾಗಿದ್ದಾರೆ.

### ಪ್ರವಾಸಿ ಸ್ಥಳಗಳಲ್ಲಿ ಅಲರ್ಟ್

ಜಿಲ್ಲೆಯ ಐತಿಹಾಸಿಕ ಪ್ರವಾಸಿ ತಾಣಗಳಲ್ಲೂ ಕಟ್ಟೆಚ್ಚರ ವಹಿಸಲಾಗಿದೆ. ಜಿಲ್ಲೆಯಲ್ಲಿ ರಾಜ್ಯ ಹಾಗೂ ಕೇಂದ್ರ ಪುರಾತತ್ವ, ರಾಜ್ಯ ಪ್ರವಾಸೋದ್ಯಮ ಇಲಾಖೆಗೆ ಸೇರಿದ ಅನೇಕ ಸ್ಥಳಗಳಿವೆ. ನಿತ್ಯ ಸಾವಿರಾರು ಜನರು ಪ್ರವಾಸಕ್ಕಾಗಿ ಬರುವುದರಿಂದ ಅಗತ್ಯ ಮುನ್ನೆಚ್ಚರಿಕೆ ವಹಿಸಲಾಗಿದೆ. ಕೇಂದ್ರ ಹಾಗು ರಾಜ್ಯ ಪುರಾತತ್ವ ಇಲಾಖೆಯಲ್ಲಿ ಮೊದಲೇ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದ್ದು, ಭೇಟಿಗೆ ಬರುವವರ ಮೇಲೆ ನಿಗಾ ಇಡುವಂತೆ ಸೂಚಿಸಲಾಗಿದೆ. ಪ್ರವಾಸಿಗರ ರಕ್ಷಣೆ ಅತಿಮುಖ್ಯವಾಗಿರುವುದರಿಂದ ಎಲ್ಲಾ ಕಡೆ ಸಿಬ್ಬಂದಿ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದಾರೆ.

## ಸೈನಿಕರಿಗಾಗಿ ಮಿಡಿದ ಮುಸ್ಲಿಂ ಸಮಾಜ

### ಮುಸ್ಲಿಂರ ಪ್ರಾರ್ಥನೆ

ಭಾರತೀಯ ಸೇನೆ ಹಾಗು ಸೈನಿಕರ ಶ್ರೇಯಸ್ಸಿಗಾಗಿ ನಗರ ಸೇರಿ ಜಿಲ್ಲಾದ್ಯಂತ ಮುಸ್ಲಿಂ ಬಾಂಧವರು ಶುಕ್ರವಾರದ ನಮಾಜ್ ವೇಳೆ ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ಸಕಲೇಶಪುರದ ಬದ್ರಿಯಾ ಜುಮ್ಮಾ ಮಸೀದಿ ಧಾರ್ಮಿಕ ಗುರು ಅಬ್ದುಲ್ ರಜಾಕ್ ಸಖಾಪಿ ಮಾತನಾಡಿ, ಯುದ್ಧದ ಭೀಕರತೆ ಭಯಾನಕವಾಗಿದ್ದರೂ, ದೇಶದ ಸುರಕ್ಷತೆಗಾಗಿ ಅದು ಅನಿವಾರ್ಯವಾಗಿದೆ. ಸಂದಿಗ್ಧ ಪರಿಸ್ಥಿತಿಯಲ್ಲಿ ರಾಷ್ಟ್ರದ ಎಲ್ಲರೂ ಒಗ್ಗಟ್ಟು ಪ್ರದರ್ಶಿಸಬೇಕು ಎಂದು ಹೇಳಿದರು.

ಇತ್ತೀಚೆಗೆ ಕಾಶ್ಮೀರದ ಪಹಲ್ಗಾಮ್‌ನಲ್ಲಿ ಭಯೋತ್ಪಾದಕರು ಅಮಾಯಕರನ್ನು ಕೊಂದಿರುವ ಘಟನೆ ಖಂಡನೀಯ. ಇಸ್ಲಾಂ ಹಿಂಸೆಯನ್ನು ಸಹಿಸುವುದಿಲ್ಲ. ಕುಟುಂಬದೊಂದಿಗೆ ಪ್ರವಾಸಕ್ಕೆ ತೆರಳಿದ್ದ ವೇಳೆಯಲ್ಲಿ ಅಮಾಯಕರನ್ನು ಹತ್ಯೆ ಮಾಡಿರುವ ಕೃತ್ಯವನ್ನು ಯಾರೂ ಸಹಿಸುವುದಿಲ್ಲ. ಇಂತಹ ಘಟನೆಗಳನ್ನುದೇಶದ ಪ್ರತಿಯೊಬ್ಬ ನಾಗರಿಕರು ಖಂಡಿಸಬೇಕು ಎಂದರು.

ದೇಶದ ಎಲ್ಲರೂ ಏಕತೆಯಿಂದ ಭಯೋತ್ಪಾದನೆಯ ವಿರುದ್ಧ ಕೈಜೋಡಿಸಬೇಕು. ಭಾರತೀಯ ಸೈನಿಕರು ಗಡಿಯಾಚೆಗಿನ ಭಯೋತ್ಪಾದಕ ನೆಲೆಗಳನ್ನು ಗುರಿಯಾಗಿಸಿ ನಾಶಪಡಿಸುತ್ತಿರುವ ಕಾರ್ಯವನ್ನು ಶ್ಲಾಘಿಸಿದರು.

ಪಾಕಿಸ್ತಾನವು ಭಯೋತ್ಪಾದನೆಗೆ ಬೆಂಬಲ ನೀಡುವುದನ್ನು ತಕ್ಷಣವೇ ನಿಲ್ಲಿಸಬೇಕು.



ಒಂದು ವೇಳೆ ಅದು ಮುಂದುವರಿದರೆ ದೇಶದ ಜನರ ರಕ್ಷಣೆಗಾಗಿ ನಮ್ಮ ಸೈನಿಕರು ಯುದ್ಧದಲ್ಲಿ ತೊಡಗುವುದು ಅನಿವಾರ್ಯವಾಗಲಿದೆ ಎಂದು ಅವರು ಎಚ್ಚರಿಸಿದರು.

ಆಪರೇಷನ್ ಸಿಂದೂರ ಕಾರ್ಯಾಚರಣೆಯು ದೇಶದ ಸುರಕ್ಷತೆಗೆ ಸೈನಿಕರ ಬದ್ಧತೆಯನ್ನು ತೋರಿಸುತ್ತದೆ. ಈ ಹಿನ್ನೆಲೆಯಲ್ಲಿ ದೇಶದ ಸೈನಿಕರಿಗೆ ಶಕ್ತಿ ತುಂಬಲು ಮತ್ತು ಅವರ ಯಶಸ್ಸಿಗಾಗಿ ಬದ್ರಿಯಾ ಜುಮ್ಮಾ ಮಸೀದಿಯಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಲಾಗಿದೆ ಎಂದು ತಿಳಿಸಿದರು. ದೇಶದ ಇತರ ಮಸೀದಿಗಳಲ್ಲೂ ಇಂತಹ ಪ್ರಾರ್ಥನೆಗಳು ನಡೆಯುತ್ತಿವೆ ಎಂದು ಹೇಳಿದರು.

ದೇಶಕ್ಕಾಗಿ ಹೋರಾಡುತ್ತಿರುವ ಭಾರತೀಯ ಸೈನಿಕರಿಗೆ ದೇವರು ಶಕ್ತಿ ನೀಡಲಿ. ದೇಶದಲ್ಲಿ ಶಾಂತಿ, ಸೌಹಾರ್ದತೆ ಮತ್ತು ಏಕತೆ ನೆಲೆಗೊಳ್ಳಲಿ ಎಂದು ಪ್ರಾರ್ಥಿಸಲಾಯಿತು.

> ಮೈಸೂರು ವಿಭಾಗೀಯ ಸುರಕ್ಷಾ ಆಯುಕ್ತ ಸ್ವಾಮ್ ಪ್ರಶಾಂತ್ ಅವರ ಮಾರ್ಗದರ್ಶನದಲ್ಲಿ ತಪಾಸಣೆ ಕೈಗೊಳ್ಳಲಾಗಿದೆ. ರೈಲ್ವೆ ರಕ್ಷಣಾ ದಳದ ಅಧಿಕಾರಿ ಮತ್ತು ಸಿಬ್ಬಂದಿ ಬಿಗಿ ಭದ್ರತೆ ಕೈಗೊಂಡಿದೆ. ಪ್ರಯಾಣಿಕರ ಲಗ್ಗೇಜ್ , ರೈಲ್ವೆ ಹಳಿ, ವಾಹನ ಪಾರ್ಕಿಂಗ್ ಸ್ಥಳಗಳಲ್ಲಿ ತಪಾಸಣೆ ಕೈಗೊಳ್ಳಲಾಗಿದೆ. **-ಆರ್.ಡಿ. ಪಾಟೀಲ್, ಹಾಸನ ರೈಲ್ವೆ ಇನ್ಸ್ಪೆಕ್ಟರ್**

## ಜಾತ್ರಾ ಸ್ಥಳಕ್ಕೆ ನುಗ್ಗಿದ ಕಾಡಾನೆಗಳು: ಆತಂಕ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ತಾಲ್ಲೂಕಿನ ಲಿಂಗಾಪುರ ಗ್ರಾಮದಲ್ಲಿ ಗುರುವಾರ ರಾತ್ರಿ ನಡೆಯುತ್ತಿದ್ದ ದೇವಸ್ಥಾನದ ಜಾತ್ರೆ ವೇಳೆ ಮೂರ್ನಾಲ್ಕು ಕಾಡಾನೆಗಳು ಏಕಾಏಕಿ ಪ್ರತ್ಯಕ್ಷಗೊಂಡು ಭಕ್ತರು ದಿಕ್ಕಾಪಾಲಾಗುವಂತೆ ಮಾಡಿದವು.

ಕೋಟೆದ ಬಬ್ಬುಸ್ವಾಮಿ, ಚಾಮುಂಡೇಶ್ವರಿ ಹಾಗೂ ಪರಿವಾರ ದೈವಗಳ ದೇವಸ್ಥಾನದ ಪುನರ್ ಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ನೂರಾರು ಭಕ್ತರು ಭಾಗವಹಿಸಿದ್ದ ವೇಳೆ ಘಟನೆ ನಡೆದಿದೆ. ಕೆಲವು ತಿಂಗಳುಗಳಿಂದ ಈ ಭಾಗದಿಂದ ಕಣ್ಮರೆಯಾಗಿದ್ದ ಕಾಡಾನೆಗಳು ದೇವಸ್ಥಾನದ ಸಮೀಪಕ್ಕೆ ಆಗಮಿಸಿದವು.

ಅದನ್ನು ಕಂಡ ಗ್ರಾಮಸ್ಥರು ಮೊಬೈಲ್‌ನಲ್ಲಿ ವಿಡಿಯೋ ಚಿತ್ರೀಕರಿಸಲು ಮುಗಿಬಿದ್ದರು. ಆದರೆ, ಜನರ ಕಿರುಚಾಟಕ್ಕೆ ರೊಚ್ಚಿಗೆದ್ದ ಕಾಡಾನೆಗಳು ರಸ್ತೆ ದಾಟಲು ಪರದಾಡಿ, ಘೀಳಿಡುತ್ತ ಕಾರು ಮತ್ತು ಬೈಕ್‌ಗಳ ಮೇಲೆ ದಾಳಿ ನಡೆಸಿವೆ.

ಈ ದಾಳಿಯಲ್ಲಿ ಕೆಲವು ವಾಹನಗಳು ಜಖಂಗೊಂಡಿವೆ. ಭಯಭೀತರಾದ ಭಕ್ತರು ಚೆಲ್ಲಾಪಿಲ್ಲಿಯಾಗಿ ಓಡಿದ ದೃಶ್ಯ ಗ್ರಾಮದಲ್ಲಿ ಗೊಂದಲದ ವಾತಾವರಣ ಸೃಷ್ಟಿಸಿತು. ದೇವಸ್ಥಾನದ ಆಡಳಿತ ಮಂಡಳಿಯವರು ಪಟಾಕಿ ಸಿಡಿಸಿ ಕಾಡಾನೆಗಳನ್ನು ಓಡಿಸಲು ಪ್ರಯತ್ನಿಸಿದರು. ಸುದ್ದಿ ತಿಳಿದು ಸ್ಥಳಕ್ಕೆ ಧಾವಿಸಿದ ಅರಣ್ಯ ಇಲಾಖೆಯ ಎಲಿಫೆಂಟ್ ಟಾಸ್ಕ್ ಫೋರ್ಸ್ ಹಾಗೂ ಪೊಲೀಸ್ ಸಿಬ್ಬಂದಿ, ಭಕ್ತ ಸಮೂಹವನ್ನು ನಿಯಂತ್ರಿಸಿಕೊಳ್ಳಲು ಹಾಗೂ ಕಾಡಾನೆಗಳನ್ನು ಕಾಡಿನೊಳಗೆ ಓಡಿಸಲು ಹರಸಾಹಸಪಟ್ಟರು.

ಸೈರನ್ ಬಳಸಿ ಕಾಡಾನೆಗಳನ್ನು ಓಡಿಸುವ ಪ್ರಯತ್ನ ನಡೆಸಿದ ಇಟಿಎಫ್ ಸಿಬ್ಬಂದಿಯ ಕಾರ್ಯಾಚರಣೆಯ ನಂತರ ಕಾಡಾನೆಗಳು ರಸ್ತೆ ದಾಟಿ ಕಾಡಿನೊಳಗೆ ತೆರಳಿದವು.

## ವೀರ ಚಂದ್ರಹಾಸ ಸಿನಿಮಾದಲ್ಲಿ ಬ್ರಾಹ್ಮಣರ ಅವಹೇಳನ: ಖಂಡನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಇತ್ತೀಚೆಗೆ ಬಿಡುಗಡೆಯಾದ ವೀರ ಚಂದ್ರಹಾಸ ಚಲನಚಿತ್ರದಲ್ಲಿ ಬ್ರಾಹ್ಮಣ ಸಮುದಾಯಕ್ಕೆ ಅವಹೇಳನ ಮಾಡಿದ್ದು, ಆಕ್ಷೇಪಾರ್ಹ ದೃಶ್ಯಗಳಿಗೆ ಕತ್ತರಿ ಹಾಕಬೇಕು ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಉಪಾಧ್ಯಕ್ಷ ಕೆ.ಪಿ.ಎಸ್. ಪ್ರಮೋದ್ ಆಗ್ರಹಿಸಿದರು.




ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ಏ.18 ರಂದು ರಾಜ್ಯಾದ್ಯಂತ ತೆರೆಕಂಡ ರವಿ ಬಸ್ರೂರ್ ನಿರ್ದೇಶನದ ವೀರ ಚಂದ್ರಹಾಸ ಚಿತ್ರದಲ್ಲಿ ಬ್ರಾಹ್ಮಣರ ಕುರಿತು ಅವಹೇಳನಕಾರಿಯಾಗಿ ಚಿತ್ರಿಸಿರುವುದು ಖಂಡನೀಯ. ಬ್ರಾಹ್ಮಣರು ಭೋಜನ ಪ್ರಿಯರು ಎನ್ನುವ ಮಾತಿನಿಂದ ಶುರುವಾಗುವ ಚಿತ್ರದಲ್ಲಿ ನಿರಂತರವಾಗಿ ಬ್ರಾಹ್ಮಣರ ಬಗ್ಗೆ ವ್ಯಂಗ್ಯವಾಗಿ, ಕೀಳಾಗಿ, ಅವಹೇಳನ ಮಾಡುತ್ತಾ ಅವರ ಊಟ, ದಕ್ಷಿಣೆ ವಿಚಾರ, ನಡತೆ, ಇತ್ಯಾದಿಗಳ ಬಗ್ಗೆ ಲಘುವಾಗಿ ಚಿತ್ರೀಕರಣ ಮಾಡಿರುವುದು ಬೇಸರದ ವಿಷಯ ಎಂದರು.

ಸಿನಿಮಾದುದ್ದಕ್ಕೂ ಬ್ರಾಹ್ಮಣರ ಪಾತ್ರವನ್ನು ಗಂಭೀರವಾಗಿ ಗೌರವಯುತವಾಗಿ ನಡೆಸಿಕೊಳ್ಳದೆ ತಮಾಷೆಯ ವಸ್ತುವಾಗಿ ಬಳಸಿಕೊಂಡಿರುವುದು ಖಂಡನೀಯ. ಎಲ್ಲಕ್ಕಿಂತ ಮುಖ್ಯವಾಗಿ ಇಲ್ಲಿ ಬೇರೆ ಯಾವುದೇ ಪಾತ್ರದ ಜಾತಿಯನ್ನೂ ಉಲ್ಲೇಖಿಸಿಲ್ಲ.

ಕಥೆಗೆ ಬ್ರಾಹ್ಮಣರ ಅಥವಾ ಪೌರೋಹಿತರ ಪಾತ್ರ ಅಗತ್ಯವಾದರೆ ಅದನ್ನು ಗೌರವಯುತವಾಗಿ ಚಿತ್ರಿಸಲು ಸಾಧ್ಯವಿತ್ತು. ಇಷ್ಟಕ್ಕೂ ಇವೆಲ್ಲ ಮೂಲ ಚಂದ್ರಹಾಸ ಕತೆಯಲ್ಲಿ ಇಲ್ಲ. ಇವರು ಮನಸ್ಸಿಗೆ ಬಂದಂತೆ ಕಥೆ ಹೆಣೆದು ಒಂದು ಜಾತಿಯನ್ನು ಕೀಳಾಗಿ ಚಿತ್ರಿಸಿರುವುದು ಸರಿಯಲ್ಲ ಎಂದರು.

ಇದು ಕೇವಲ ಒಂದು ಜಾತಿಯನ್ನು ಗುರಿಯಾಗಿಟ್ಟುಕೊಂಡು ಮಾತನಾಡುವ ವಿಷಯವಲ್ಲ. ಚಲನಚಿತ್ರಗಳು ಸಮಾಜಕ್ಕೆ ಮಾದರಿಯಾಗಿರಬೇಕು, ಉತ್ತಮ ಅಂಶಗಳನ್ನು ಸಮಾಜಕ್ಕೆ ಕೊಡಬೇಕು. ಕೇವಲ ವ್ಯಾವಾಹಾರಿಕ ದೃಷ್ಟಿಯಲ್ಲಿ ಚಲನಚಿತ್ರಗಳನ್ನು ಕೊಂಡೊಯ್ಯುವ ಭರದಲ್ಲಿ ತಮ್ಮ ಕಥಾಹಂದರದಲ್ಲಿ ಯಾವ ಜಾತಿಯವರಿಗೂ ಸಹ ಬೇಸರ ಮೂಡಿಸುವ ಅಂಶ ಚಿತ್ರಿಸುವುದು ಸರಿಯಲ್ಲ, ಇದು ಸಮಾಜದಲ್ಲಿ ಶಾಂತಿ ಹಾಗೂ ಸೌಹಾರ್ದತೆ ಕದಡುವ ಪ್ರಯತ್ನ ಮಾಡುತ್ತವೆ ಎಂದರು.

ಹಲವಾರು ವರ್ಷಗಳಿಂದ ಇಂಥ ಬೆಳವಣಿಗೆ ನಡೆಯುತ್ತಿದ್ದರೂ, ಶಾಂತಿಪ್ರಿಯರಾದ ನಾವು ಸೌಮ್ಯವಾಗಿದ್ದುಕೊಂಡು ಬಂದಿದ್ದೇವೆ. ವೀರ ಚಂದ್ರಹಾಸ ನಿರ್ದೇಶಕರು, ಕ್ಷಮೆ ಕೇಳಿದ್ದು, ಅವಹೇಳಕಾರಿ ತುಣುಕು ತೆಗೆಯುವುದಾಗಿ ಹೇಳಿದ್ದಾರೆ. ಅದೇನೆ ಇದ್ದರೂ, ಯಾವುದೇ ಸಮಾಜವನ್ನು ಅವಹೇಳನ ಮಾಡುವುದು ತರವಲ್ಲ ಎಂದರು. ಇನ್ನು ಮುಂದೆ ಈ ರೀತಿಯ ಅವಹೇಳನಕಾರಿ ಧೋರಣೆ ಮುಂದುವರಿದರೆ ಹೋರಾಟಕ್ಕೆ ಇಳಿಯಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಪತ್ರಿಕಾಗೋಷ್ಠಿಯಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಜಿಲ್ಲೊ ಪ್ರತಿನಿಧಿ ವೆಂಕಟೇಶ್, ಜಿಲ್ಲಾ ಬ್ರಾಹ್ಮಣ ಸಂಘದ ನಿರ್ದೇಶಕ ನಾಗರಾಜು, ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷ ವೆಂಕಟೇಶ್ ಮೂರ್ತಿ, ನಗರಸಭೆ ಮಾಜಿ ಸದಸ್ಯ ಶ್ರೇಯಸ್ ಇದ್ದರು.

## ಮೇ 12 ರಂದು ಬುದ್ಧ ಜಯಂತಿ ಆಚರಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಮೇ 12ರ ಸೋಮವಾರ ಬುದ್ಧ ಜಯಂತಿ ಹಮ್ಮಿಕೊಳ್ಳಲಾಗಿದೆ ಎಂದು ಭಾರತೀಯ ಬೌದ್ಧ ಸಮಾಜದ ಅಧ್ಯಕ್ಷ ಹೆಚ್.ಟಿ.ಬಸವರಾಜ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ಅಂದು ಬೆಳಗ್ಗೆ ಜಿಲ್ಲಾಧಿಕಾರಿ ಕಚೇರಿಯಿಂದ ಹಾಸನಾಂಬ ಕಲಾಕ್ಷೇತ್ರದ ವರೆಗೆ ಮೆರವಣಿಗೆ ನಡೆಯಲಿದೆ. ಬುದ್ಧ ಜಯಂತಿಯನ್ನು ಸರ್ಕಾರಿ ಕಾರ್ಯಕ್ರಮವಾಗಿ ಆಚರಿಸಬೇಕೆಂದು ಹಲವು ವರ್ಷಗಳಿಂದ ಅನೇಕರು ಮನವಿ ಮಾಡಿದ್ದೆವು. ಅದಕ್ಕೆ ಸರ್ಕಾರ




ಸ್ಪಂದಿಸಿದ್ದು, ಸರ್ಕಾರಕ್ಕೆ ಧನ್ಯವಾದ ಹೇಳಿದರು. ಜಿಲ್ಲೆಯಲ್ಲಿ 11 ಬುದ್ಧ ವಿಹಾರಗಳಿದ್ದು, ಹಲವು ಸಂಘ ಸಂಸ್ಥೆಗಳಿದ್ದು, ಅವರೆಲ್ಲರೂ ಅಂದಿನ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮನ್ನೂ ಮುನ್ನ ಬುದ್ಧವಂದನಾ ನಡೆಯಲಿದೆ. ನಂತರ ಸರ್ವ ಜನಾಂಗದವರನ್ನು ಒಳಗೊಂಡು ಸಾರ್ವಜನಿಕ ಬುದ್ಧಜಯಂತಿ ಕಾರ್ಯಕ್ರಮ ನಡೆಯಲಿದೆ ಎಂದರು. ಬುದ್ಧ ಪೌರ್ಣಿಮೆ ಪ್ರಪಂಚದ ಎಲ್ಲ ಬೌದ್ಧರಿಗೂ ಅತ್ಯಂತ ಪವಿತ್ರವಾದ ದಿನ. ಸುಮಾರು 30 ರಾಷ್ಟ್ರಗಳಲ್ಲಿ ರಾಷ್ಟ್ರೀಯ ಹಬ್ಬವಾಗಿ ಆಚರಿಸುತ್ತಾರೆ ಎಂದರು.

ಕ್ರಿ.ಪೂ. 623ನೇ ವೈಶಾಖ ಹುಣ್ಣಿಮೆ ದಿನದಂದು ಸಿದ್ಧಾರ್ಥ ಗೌತಮ ಅವರ ಜನನ ದಿನ. ಯುವಕ ಸಿದ್ಧಾರ್ಥ ಗೌತಮರು ಸಮಾಜದ ತಾರತಮ್ಯ, ಅಸಮಾನತೆ, ಮೇಲುಕೀಳು, ಮೌಢ್ಯಗಳ ನಿವಾರಣೆಗಾಗಿ 29ನೇ ವಯಸ್ಸಿನಲ್ಲಿ ತನ್ನ ಸಂಸಾರಿಕ ಜೀವನ, ಸಂಪತ್ತು, ರಾಜ್ಯಾಧಿಕಾರ ತೊರೆದು ಸುಮಾರು 6 ವರ್ಷಗಳ ಸತತ ಧ್ಯಾನದ ಮೂಲಕ ತನ್ನ 35ನೇ ವಯಸ್ಸಿನಲ್ಲಿ ಪ್ರಾಕೃತಿಕ ಜ್ಞಾನೋದಯ ಪಡೆದರು. ಮನುಷ್ಯನ ದುಃಖ ವಿನಾಶಕ್ಕೆ ಪಂಚಶೀಲ, ಅಷ್ಟಾಂಗ ಮಾರ್ಗಗಳನ್ನು ಬೋಧಿಸಿ ಸಂತೋಷಮಯ ಜೀವನ ನಡೆಸಲು ದಾರಿ ತೋರಿದರು ಎಂದರು.ಬಾಬಾಸಾಹೇಬರು ತೋರಿದ ದಮ್ಮದ ಹಾದಿಯಲ್ಲಿ ನಡೆಯುವ ಮೂಲಕ ಅವರ ಆಶಯ ಈಡೇರಿಸೋಣ ಎಂದು ಕರೆ ನೀಡಿದರು.

## ಉದ್ಯೋಗ ಮೇಳ: ವ್ಯಾಪಕ ಪ್ರಚಾರ ಅಗತ್ಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯ ನಿರುದ್ಯೋಗಿ ಯುವಕ - ಯುವತಿಯರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಅರ್ಥಪೂರ್ಣ ಉದ್ಯೋಗ ಮೇಳ ಆಯೋಜಿಸಬೇಕು ಎಂದು ಸಂಸದ ಶ್ರೇಯಸ್ ಪಟೇಲ್ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಉದ್ಯೋಗ ಮೇಳ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಜಿಲ್ಲೆಯ ಪ್ರತಿ ಗ್ರಾಮಗಳಲ್ಲೂ ಉದ್ಯೋಗ ಮೇಳ ಕುರಿತು ಪ್ರಚಾರ ಮಾಡಬೇಕು ಎಂದು ಜಿಲ್ಲಾ ಪಂಚಾಯಿತಿ ಯೋಜನಾ ನಿರ್ದೇಶಕರಿಗೆ ಸೂಚನೆ ನೀಡಿದರು.




ಈಗಾಗಲೇ ಕಲಬುರಗಿ, ಮಂಡ್ಯ ಜಿಲ್ಲೆಗಳಲ್ಲಿ ಉದ್ಯೋಗ ಮೇಳ ನಡೆಸಲಾಗಿದೆ. ಆ ಜಿಲ್ಲೆಗಳಿಂದ ಸಂಪೂರ್ಣ ಮಾಹಿತಿ ಪಡೆದು ಕಾರ್ಯಕ್ರಮ ರೂಪಿಸಬೇಕು. ಜಿಲ್ಲಾ ಮಟ್ಟದಲ್ಲಿ ಮತ್ತೊಂದು ಸಭೆ ನಡೆಸಿದ ನಂತರ ದಿನಾಂಕ ನಿಗದಿ ಮಾಡಲಾಗುವುದು ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಸಿ. ಸತ್ಯಭಾಮ ಮಾತನಾಡಿ, ಉದ್ಯೋಗಗಳ ಲಭ್ಯತೆಯನ್ನು ಅರಿಯಲು ಸ್ಥಳೀಯ ಕೈಗಾರಿಕೆ ಸಂಸ್ಥೆಗಳ ಮುಖ್ಯಸ್ಥರು, ತಾಂತ್ರಿಕ ಕಾಲೇಜುಗಳ ಮುಖ್ಯಸ್ಥರು, ರೆಸಾರ್ಟ್, ಹೋಟೆಲ್, ಖಾಸಗಿ ಶಾಲೆಗಳು, ನರ್ಸಿಂಗ್ ಹೋಂ ಹಾಗೂ ಖಾಸಗಿ ಸಂಸ್ಥೆಗಳ ಮುಖ್ಯಸ್ಥರು ಮತ್ತು ವಿವಿಧ ಇಲಾಖೆಗಳ ಅಧಿಕಾರಿಗಳ ಸಭೆ ಕರೆಯಲು ಕೌಶಲ್ಯಾಭಿವೃದ್ಧಿ ಅಧಿಕಾರಿಗೆ ಸೂಚಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ ಮಾತನಾಡಿ, ಉದ್ಯೋಗ ಮೇಳದಲ್ಲಿ ಭಾಗವಹಿಸುವ ಕಂಪನಿಗಳು ಆಯ್ಕೆಯಾದ ಅಭ್ಯರ್ಥಿಗಳಿಗೆ ಆ ದಿನವೇ ನೇಮಕಾತಿ ಪತ್ರ ನೀಡುವಂತೆ ತಾಕೀತು ಮಾಡಬೇಕು ಎಂದು ತಿಳಿಸಿದರು.

ಜಿಲ್ಲಾ ಪಂಚಾಯಿತಿ ಯೋಜನಾ ನಿರ್ದೇಶಕ ಚಂದ್ರಮೌಳಿ, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ವಿಜಯಲಕ್ಷ್ಮಿ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಜರಿದ್ದರು.

## ಸುಟ್ಟ ಸ್ಥಿತಿಯಲ್ಲಿ ವ್ಯಕ್ತಿ ಮೃತದೇಹ ಪತ್ತೆ: ಕೊಲೆ ಶಂಕೆ

ಚನ್ನರಾಯಪಟ್ಟಣ: ತಾಲ್ಲೂಕಿನ ಆನೆಕೆರೆ ಗ್ರಾಮದಲ್ಲಿ ಸುಟ್ಟ ಸ್ಥಿತಿಯಲ್ಲಿ ವ್ಯಕ್ತಿಯೊಬ್ಬರ ಮೃತದೇಹ ಪತ್ತೆಯಾಗಿದ್ದು, ಮೃತರ ಪತ್ನಿ ಕೊಲೆ ಶಂಕೆ ವ್ಯಕ್ತಪಡಿಸಿದ್ದಾರೆ.

ತಾಲ್ಲೂಕಿನ ದಂಡಿಗನಹಳ್ಳಿ ಹೋಬಳಿ ಆನೆಕೆರೆ ಗ್ರಾಮದ ಜಯಶೀಲನ್ ಮೃತರು. ಗ್ರಾಮದಲ್ಲಿ ಅನಧಿಕೃತವಾಗಿ ಮದ್ಯ ಮಾರಾಟ ಮಾಡುತ್ತಿದ್ದ ಹರೀಶ್ ಹಾಗೂ ಇತರರು ತಮ್ಮ ಪತಿ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ ನಂತರ ದೇಹವನ್ನು ಸಂಪೂರ್ಣ ಸುಟ್ಟು ಹಾಕಿದ್ದಾರೆ ಎಂದು ವಿಜಯಲಕ್ಷ್ಮಿ ಆರೋಪಿಸಿದ್ದಾರೆ. ಮದ್ಯ ವ್ಯಸನಿಯಾಗಿದ್ದ ಜಯಶೀಲ ನಿತ್ಯ ಹರೀಶ್ ಅಂಗಡಿಯಲ್ಲಿ ಮದ್ಯ ಖರೀದಿಸುತ್ತಿದ್ದ. ಆತನಿಗೆ ಮದ್ಯ ನೀಡದಂತೆ ಮನವಿ ಮಾಡಲಾಗಿತ್ತು. ಆಗ ಹರೀಶ್ ಅದಕ್ಕೆ ತಲೆ ಕೆಡಿಸಿಕೊಳ್ಳದೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದ ಎನ್ನಲಾಗಿದೆ. ಇದೇ ವಿಚಾರವಾಗಿ ಹರೀಶ್ ಹಾಗೂ ಜಯಶೀಲನ್ ನಡುವೆ ಗಲಾಟೆ ನಡೆದು ಹರೀಶ್ ಮತ್ತು ಇತರರು ಹಲ್ಲೆ ನಡೆಸಿ ಕೊಲೆಗೈದಿದ್ದಾರೆ ಎಂದು ಆರೋಪಿಸಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಸದಸ್ಯತ್ವ ರದ್ದು ಪ್ರಕರಣ: ತೀರ್ಪು ಕಾಯ್ದಿರಿಸಿದ ಕೋರ್ಟ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ನಗರಸಭೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಚುನಾವಣೆಯಲ್ಲಿ ವಿಪ್ ಉಲ್ಲಂಘಿಸಿದ ಪ್ರಕರಣ ಸಂಬಂಧ ಜೆಡಿಎಸ್ ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ಶುಕ್ರವಾರ ನಡೆಸಿದ ಜಿಲ್ಲಾಧಿಕಾರಿ ನ್ಯಾಯಾಲಯ ತೀರ್ಪು ಕಾಯ್ದಿರಿಸಿದ್ದು ಪಕ್ಷ ವಿರೋಧಿ ಚಟುವಟಿಕೆ ಆರೋಪ ಹೊತ್ತ ಸದಸ್ಯರಲ್ಲಿ ಆತಂಕ ಮನೆ ಮಾಡಿದೆ.

2024ರ ಆ. 22 ರಂದು ನಡೆದಿದ್ದ ಚುನಾವಣೆಯಲ್ಲಿ ಜೆಡಿಎಸ್‌ನಿಂದ ಗೆದ್ದಿದ್ದರೂ ಪಕ್ಷ ಸೂಚಿಸಿದವರಿಗೆ ಮತ ಹಾಕದೆ ವಿಪ್ ಉಲ್ಲಂಘಿಸಿದ ಆರೋಪದಡಿ ಅಧ್ಯಕ್ಷ ಸ್ಥಾನ ಆಕಾಂಕ್ಷಿ ಸದಸ್ಯೆ ಸುಜಾತಾ ರಮೇಶ್ ಅವರು ಪಕ್ಷದ 13 ಸದಸ್ಯರ ಸದಸ್ಯತ್ವ



ರದ್ದುಪಡಿಸಬೇಕೆಂದು ದೂರು ಸಲ್ಲಿಸಿದ್ದರು. ಈ ಸಂಬಂಧ ಎಂಟು ತಿಂಗಳಿಂದ ವಿಚಾರಣೆ ನಡೆಸುತ್ತಾ ಬಂದ ಜಿಲ್ಲಾಧಿಕಾರಿಗಳ ನ್ಯಾಯಾಲಯ ಶುಕ್ರವಾರ ವಿಚಾರಣೆ ನಡೆಸಿ ಅಂತಿಮ ತೀರ್ಪು ಕಾಯ್ದಿರಿಸಿತು. ಆ ಮೂಲಕ ಪಕ್ಷ ವಿರೋಧಿ ಚಟುವಟಿಕೆಯಲ್ಲಿ ಭಾಗಿಯಾದವರ ಸದಸ್ಯತ್ವ ರದ್ದಾಗುವ ಭರವಸೆಯಲ್ಲಿ ಜೆಡಿಎಸ್ ನಾಯಕರಿದ್ದಾರೆ.

ಜೆಡಿಎಸ್ ಜಿಲ್ಲಾಧ್ಯಕ್ಷ ಕೆ.ಎಸ್. ಲಿಂಗೇಶ್ ಹಾಗು ಸದಸ್ಯೆ ಸುಜಾತ ರಮೇಶ್ ಅವರು ಸಲ್ಲಿಸಿದ್ದ ಅರ್ಜಿ ಅರ್ಜಿ ವಿಚಾರಣೆಯನ್ನು ಸೆ. 20, ಅ. 25, ಡಿ. 30 ಹೀಗೆ ಪ್ರತಿ ತಿಂಗಳು ಮುಂದೂಡುತ್ತಾ ಬಂದಿತ್ತು. ಜಿಲ್ಲಾಧಿಕಾರಿ ನ್ಯಾಯಾಲಯದ ವಿಳಂಬ ಧೋರಣೆಗೆ ಬೇಸತ್ತ ಸುಜಾತಾ ರಮೇಶ್ ಅವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ತ್ವರಿತಗತಿಯಲ್ಲಿ ವಿಚಾರಣೆ ಪೂರ್ಣಗೊಳಿಸಿ ವಿವರ ನೀಡಬೇಕೆಂದು ಹೈಕೋರ್ಟ್ ಸೂಚಿಸಿದ ಹಿನ್ನಲೆಯಲ್ಲಿ ಶುಕ್ರವಾರ ವಿಚಾರಣೆ ಕೈಗೆತ್ತಿಕೊಂಡ ಜಿಲ್ಲಾ ದಂಡಾಧಿಕಾರಿ ಸಿ. ಸತ್ಯಭಾಮ ಅವರು ಅಂತಿಮ ತೀರ್ಪನ್ನು ಕಾಯ್ದಿರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

## ಬಿತ್ತನೆ ಆಲೂ: ಕ್ವಿಂಟಾಲ್ ಗೆ 1600ರೂ. ನಿಗದಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯಲ್ಲಿ ಆಲೂಗಡ್ಡೆ ಬಿತ್ತನೆ ಬೀಜ ಮಾರಾಟ ಪ್ರಾರಂಭವಾಗಿದ್ದು, ಪ್ರತಿ ಕ್ವಿಂಟಾಲ್‌ಗೆ 1500-1600 ರೂ. ದರ ನಿಗದಿಪಡಿಸಲಾಗಿದೆ ಎಂದು ಜಿಲ್ಲಾಧಿಕಾರಿ ಸಿ. ಸತ್ಯಭಾಮ ತಿಳಿಸಿದರು.

ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣದ ಗಣಪತಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ ಆಲೂಗೆಡ್ಡೆ ಬಿತ್ತನೆ ಬೀಜ ಮಾರಾಟಕ್ಕೆ ಚಾಲನೆ ನೀಡಿ ಮಾತನಾಡಿದರು.

ಈ ಬಾರಿ ಒಳ್ಳೆಯ ಮಳೆಯಾಗುತ್ತದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ರೈತರು ಉತ್ತಮ ಬೆಳೆ ಬೆಳೆದು ಅಭಿವೃದ್ಧಿ ಹೊಂದಲಿ ಹಾಗೂ ಮಾರಾಟಗಾರರಿಗೂ ಒಳ್ಳೆಯದಾಗಲಿ ಎಂದು ದೇವರಲ್ಲಿ ಪ್ರಾರ್ಥನೆ ಸಲ್ಲಿಸಿರುವುದಾಗಿ ತಿಳಿಸಿದರು.

ಬಿತ್ತನೆ ಬೀಜವನ್ನು ನಿಗದಿತ ದರಕ್ಕಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡುವುದು ಕಂಡುಬಂದಲ್ಲಿ ಇಲಾಖೆ ಗಮನಕ್ಕೆ ತರಬೇಕು. ರೈತರು ಬಿತ್ತನೆ ಬೀಜ ಖರೀದಿಸಿದ ನಂತರ ಬಿತ್ತನೆಗೆ



ಮುನ್ನ ಅನುಸರಿಸಬೇಕಾದ ಕ್ರಮಗಳನ್ನು ಕುರಿತು ರೈತರಿಗೆ ಅರಿವು ಮೂಡಿಸಲು ಕ್ರಮ ವಹಿಸುವಂತೆ ತೋಟಗಾರಿಕೆ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ತೋಟಗಾರಿಕೆ ಇಲಾಖೆ ಉಪ ನಿರ್ದೇಶಕಿ ಮಂಗಳಾ, ತಹಸೀಲ್ದಾರ್ ಗೀತಾ, ಆಲೂಗಡ್ಡೆ ವರ್ತಕರಾದ ಗೋಪಾಲ್, ದೇವರಾಜ್, ಕೂಗಿಗೌಡ ಮತ್ತಿತರರು ಹಾಜರಿದ್ದರು.

# ಕರಾಚಿ ಬೇಕರಿ ಭಾರತದಲ್ಲೇಕಿದೆ?

## ಕನ್ನಡ ಪೋಸ್ಟ್ ವಿಶೇಷ

1953ರಲ್ಲಿ ಸಿಂಧಿ ವಲಸಿಗ ಖಾನ್‌ಚಂದ್ ರಾಮನಾನಿ ಅವರಿಂದ ಸ್ಥಾಪಿತವಾದ ಕರಾಚಿ ಬೇಕರಿ, ಹೈದರಾಬಾದ್‌ನ ಮೊಝಾಮ್ ಜಾಹಿ ಮಾರುಕಟ್ಟೆಯಲ್ಲಿ ತನ್ನ ಪಯಣವನ್ನು ಆರಂಭಿಸಿತು. ಕಾಲಾಂತರದಲ್ಲಿ ಫ್ರೂಟ್ ಬಿಸ್ಕತ್ತು, ದಿಲ್ ಕುಶ್ ಮತ್ತು ಪ್ಲಮ್ ಕೇಕ್‌ಗಳಂತಹ ರುಚಿಕರ ಖಾದ್ಯಗಳಿಗೆ ಹೆಸರಾಗಿ ಬೆಂಗಳೂರು, ಚೆನ್ನೈ ಮತ್ತು ದೆಹಲಿಯಂತಹ ನಗರಗಳಿಗೆ ವಿಸ್ತರಿಸಿ ವಿಶ್ವದಾದ್ಯಂತ ಹೆಸರು ಮಾಡಿದೆ.

ತನ್ನ ಪಾಕಶಾಸ್ತ್ರದ ಖ್ಯಾತಿಯ ಹೊರತಾಗಿಯೂ ಬೇಕರಿಯು ಹಲವು ಸವಾಲುಗಳನ್ನು ಎದುರಿಸಿದೆ. ಮೇ 2024ರಲ್ಲಿ ತೆಲಂಗಾಣ ಆಹಾರ ಸುರಕ್ಷತಾ ಆಯುಕ್ತರು ಮೊಝಾಮ್ ಜಾಹಿ ಮಾರುಕಟ್ಟೆಯ ಶಾಖೆಯಲ್ಲಿ ತಪಾಸಣೆ ನಡೆಸಿದಾಗ ರಸ್ಕ್, ಬಿಸ್ಕತ್ತು ಮತ್ತು ಕೇಕ್‌ಗಳನ್ನು ಒಳಗೊಂಡ 5,200 ರೂ. ಮೌಲ್ಯದ ಕಾಲಾವಧಿ ಮೀರಿದ ಉತ್ಪನ್ನಗಳು ಪತ್ತೆಯಾದವು. ಹೆಚ್ಚುವರಿಯಾಗಿ ಪೇಸ್ಟ್ರಿಗಳ ಮೇಲೆ ಬಳಕೆಯ ದಿನಾಂಕಟಿ ಇಲ್ಲದಿರುವುದು ಮತ್ತು ಲೇಬಲ್ ಇಲ್ಲದ ವಸ್ತುಗಳಂತಹ ಉಲ್ಲಂಘನೆಗಳನ್ನು ಗಮನಿಸಲಾಯಿತು. ಇದರಿಂದ ಕಾಲಾವಧಿ ಮೀರಿದ ವಸ್ತುಗಳನ್ನು ತಕ್ಷಣ ವಿಲೇವಾರಿ ಮಾಡಲಾಯಿತು.

2023ರ ಡಿಸೆಂಬರ್‌ನಲ್ಲಿ ಗಗನ್‌ಪಹಾಡ್ ಉತ್ಪಾದನಾ ಘಟಕದಲ್ಲಿ ಸಂಭವಿಸಿದ ಬೆಂಕಿಯಿಂದ 15 ಕಾರ್ಮಿಕರು ಗಾಯಗೊಂಡರು. ಅವರಲ್ಲಿ 12 ಮಂದಿಗೆ ಗಂಭೀರ ಸುಟ್ಟಗಾಯಗಳಾದವು. ಅತಿಯಾಗಿ ಬಿಸಿಯಾದ ಒವನ್‌ನಿಂದ ಗ್ಯಾಸ್ ಸೋರಿಕೆಯಿಂದ ಉಂಟಾದ ಈ ಘಟನೆ ತುರ್ತು ಬೆಂಕಿಯ ನಿರ್ಗಮನಗಳ ಕೊರತೆ ಸೇರಿದಂತೆ ಸುರಕ್ಷತಾ ಪ್ರೋಟೋಕಾಲ್‌ಗಳ ಲೋಪಗಳನ್ನು ಎತ್ತಿ ತೋರಿಸಿತು. ಮಾಲೀಕರ ವಿರುದ್ಧ ಐಪಿಸಿ ಸೆಕ್ಷನ್ 337ರ ಅಡಿಯಲ್ಲಿ ನಿರ್ಲಕ್ಷ್ಯಕ್ಕಾಗಿ ಪ್ರಕರಣ ದಾಖಲಿಸಲಾಯಿತು.




## ಶೇ. 100 ಭಾರತೀಯ ಸಂಸ್ಥೆ

ಭಾರತ- ಪಾಕಿಸ್ತಾನ ಉದ್ವಿಗ್ನತೆ ನಡುವೆ ಹೈದರಾಬಾದ್‌ನಲ್ಲಿ 'ಕರಾಚಿ ಬೇಕರಿ' ಸಂಕಷ್ಟಕ್ಕೊಳಗಾಗಿದ್ದು, ಬೇಕರಿ ಹೆಸರಿನ ಬದಲಾವಣೆಗೆ ಆಗ್ರಹ ಕೇಳಿ ಬಂದಿದೆ. ಈ ಬೆನ್ನಲ್ಲೇಮಾಲೀಕರು ಸ್ಪಷ್ಟನೆ ನೀಡಿದ್ದು, 'ಇದು ನೂರಕ್ಕೆ ನೂರರಷ್ಟು ಭಾರತದ ಉತ್ಪನ್ನ. ನಾವು ಭಾರತೀಯರು' ಎಂದಿದ್ದಾರೆ. ಎರಡು ದೇಶಗಳ ನಡುವೆ ಉದ್ವಿಗ್ನತೆ ಬೆನ್ನಲ್ಲೇ ಆಂಧ್ರ ಪ್ರದೇಶದ ವಿಶಾಖಪಟ್ಟಣದಲ್ಲಿ ಸಂಘಟನೆಗಳು ಬೇಕರಿ ಹೆಸರಿನ ಬದಲಾವಣೆಗೆ ಆಗ್ರಹಿಸಿ ಪ್ರತಿಭಟಿಸಿದ್ದರು.

ಈ ಬೆನ್ನಲ್ಲೇ ಮಾಲೀಕರು ಸಾಮಾಜಿಕ ಜಾಲತಾಣದಲ್ಲಿ ಈ ಬಗ್ಗೆ ಸ್ಪಷ್ಟನೆ ನೀಡಿದ್ದು ಜನರು ಪಾಕಿಸ್ತಾನದ ಸ್ಥಳದ ಹೆಸರು ಇರುವ ಕಾರಣಕ್ಕೆ ಪ್ರತಿಭಟನೆಯನ್ನು ನಡೆಸಿದ್ದಾರೆ. ಆದರೆ ವಾಸ್ತವದಲ್ಲಿ ಇದು ಭಾರತದ ಹೈದರಾಬಾದ್‌ನ ಕಂಪನಿ. ವಿಭಜನೆಯ ನಂತರ ನಮ್ಮ ಅಜ್ಜ ಭಾರತಕ್ಕೆ ಬಂದ ನಂತರ ಈ ಬ್ರ್ಯಾಂಡ್‌ಗೆ ಕರಾಚಿ ಬೇಕರಿ ಎಂದು ಹೆಸರಿಟ್ಟರು.

ಇದು ಶೇ.100ರಷ್ಟು ಭಾರತದ ಉತ್ಪನ್ನ. 1953ರಲ್ಲಿ ಸ್ಥಾಪನೆಯಾಯಿತು. ನಮ್ಮ ಹೆಸರು ನಮ್ಮ ಇತಿಹಾಸದ ಸಂಕೇತ ಹೊರತು ರಾಷ್ಟ್ರೀಯತೆ ಅಲ್ಲ. ದಯವಿಟ್ಟು ನಮಗೆ ಸಹಕರಿಸಿ ಎಂದಿದ್ದಾರೆ.

## ವಿವಾದ ಹುಟ್ಟುಹಾಕಿದ ಬೇಕರಿ

ಬೇಕರಿಯ ಹೆಸರು ಕೂಡ ವಿವಾದಗಳನ್ನು ಹುಟ್ಟು ಹಾಕಿದೆ. 2019ರಲ್ಲಿ ಪುಲ್ವಾಮಾ ದಾಳಿಯ ನಂತರ, ಬೆಂಗಳೂರಿನಲ್ಲಿ ಟಿಕರಾಚಿಟಿ ಎಂಬ ಹೆಸರನ್ನು ಬ್ರ್ಯಾಂಡ್‌ನಿಂದ ತೆಗೆದುಹಾಕುವಂತೆ ಪ್ರತಿಭಟನೆಗಳು ಭುಗಿಲೆದ್ದವು. ಇದನ್ನು ಪಾಕಿಸ್ತಾನದೊಂದಿಗೆ ಸಂಬಂಧಿಸಲಾಯಿತು. ನಿರ್ವಹಣೆಯು ತನ್ನ ಭಾರತೀಯ ಮೂಲವನ್ನು ಸ್ಪಷ್ಟಪಡಿಸಿತು. ಹೆಸರು ಸಂಸ್ಥಾಪಕರ ಮೂಲವನ್ನು ಪ್ರತಿಬಿಂಬಿಸುತ್ತದೆ ಮತ್ತು ಯಾವುದೇ ರಾಜಕೀಯ ಸಂಬಂಧವನ್ನು ಹೊಂದಿಲ್ಲ ಎಂದು ಒತ್ತಿಹೇಳಿತು. ಈ ಸವಾಲುಗಳ ಹೊರತಾಗಿಯೂ ಕರಾಚಿ ಬೇಕರಿಯು ಜನರಿಗೆ ಪ್ರೀತಿಯ ಸಂಸ್ಥೆಯಾಗಿ ಮುಂದುವರಿದಿದೆ. ಇದರ ಸಿಗ್ನೇಚರ್ ಫ್ರೂಟ್ ಬಿಸ್ಕತ್ತುಗಳು ಅಂತರರಾಷ್ಟ್ರೀಯ ಮನ್ನಣೆಯನ್ನು ಗಳಿಸಿವೆ.

2023ರಲ್ಲಿ ಟೇಸ್ಟ್ ಅಟ್ಲಾಸ್ ಅವುಗಳನ್ನು ವಿಶ್ವದ ಉನ್ನತ ಸಿಹಿತಿಂಡಿಗಳಲ್ಲಿ ಸ್ಥಾನಗೊಂಡಿತು. ಬೇಕರಿಯನ್ನು ಪಾಕಶಾಸ್ತ್ರದ ಚಿಹ್ನೆಯಾಗಿ ಸ್ಥಾಪಿಸಿತು. ಕರಾಚಿ ಬೇಕರಿಯು ಈ ತೊಡಕುಗಳನ್ನು ನಿವಾರಿಸುವಾಗ ಗುಣಮಟ್ಟ ಮತ್ತು ಪರಂಪರೆಗೆ ತನ್ನ ಬದ್ಧತೆಯು ಅಚಲವಾಗಿದೆ. ತಲೆಮಾರುಗಳಿಗೆ ಆನಂದವನ್ನು ನೀಡಿದ ಪರಂಪರೆಯನ್ನು ಎತ್ತಿಹಿಡಿಯಲು ಶ್ರಮಿಸುತ್ತಿದೆ.



# ಜಾತಿ ಗಣತಿ ಅರಿವಿಗೆ ಪೋಸ್ಟರ್ ಅಭಿಯಾನ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ರಾಜ್ಯ ಸರ್ಕಾರದಿಂದ ನಡೆಯುತ್ತಿರುವ ಪರಿಶಿಷ್ಟ ಜಾತಿ ಜನಗಣತಿ ಸಮೀಕ್ಷೆಗೆ ಸಾರ್ವಜನಿಕರು ಸಹಕರಿಸುವ ಜೊತೆಗೆ ನಿಖರ ಮಾಹಿತಿ ನೀಡಬೇಕು ಎಂದು ಡಾ. ಬಾಬು ಜಗಜೀವನ್‌ರಾಮ್ ಮಾದಿಗ ಮಹಾಸಭಾ ವೇದಿಕೆ ಜಿಲ್ಲಾಧ್ಯಕ್ಷ ಹೆಚ್.ಪಿ. ಶಂಕರರಾಜು ಹೇಳಿದರು.

ಸುದ್ದಿಗೋಷ್ಟಿಯಲ್ಲಿ ಮಾತನಾಡಿ, ಜಾತಿ ಜನಗಣತಿದಾರರು ಸಮೀಕ್ಷೆಗಾಗಿ ಮನೆಗೆ ಬಂದಾಗ ಮಾದಿಗ ಎಂದು ನಮೂದಿಸಬೇಕು.

ಈ ಬಗ್ಗೆ ಅರಿವು ಮೂಡಿಸಲು ಮನೆ ಮನೆಗೆ ಮಾದಿಗ ಮನೆ ಎನ್ನುವ ಸ್ಟಿಕ್ಕರ್ ಹಾಗೂ ಪೋಸ್ಟರ್ ಅಂಟಿಸಲಾಗುತ್ತಿದೆ ಎಂದರು.

ಪರಿಶಿಷ್ಟ ಜಾತಿಗಳಲ್ಲಿ ಜನಸಂಖ್ಯಾವಾರು ಒಳಮೀಸಲಾತಿ ವರ್ಗೀಕರಣಕ್ಕೆ ಕಳೆದ 30 ವರ್ಷಗಳಿಂದ ಮಾದಿಗ ಮತ್ತು ದಲಿತ ಸಂಘಟನೆಗಳು ಹೋರಾಟ ಮಾಡುತ್ತ ಬಂದಿವೆ. 2024ರ ಆ. 1 ರಂದು ಸುಪ್ರೀಂಕೋರ್ಟ್ ಪರಿಶಿಷ್ಟರಿಗೆ ಒಳ ಮೀಸಲಾತಿ ನೀಡಬಹುದು ಎಂದು ಆದೇಶಿಸಿದೆ. ಒಳಮೀಸಲಾತಿ ಕಲ್ಪಿಸಲು ಆಯಾ ರಾಜ್ಯಗಳ ಸರ್ಕಾರಕ್ಕೆ ಅಧಿಕಾರ ನೀಡಿದೆ. ಇದಾದ ನಂತರ ನಿವೃತ್ತ ನ್ಯಾ.ನಾಗಮೋಹನ್ ದಾಸ್ ಅವರ ಸಮಿತಿಗೆ ದತ್ತಾಂಶ ಸಂಗ್ರಹಿಸಲು ಸರ್ಕಾರ ಸೂಚನೆ ನೀಡಿತು.



ಆದರೆ ನಿರ್ದಿಷ್ಟವಾದ ಮಾಹಿತಿ ಸಿಗದ ಕಾರಣ ಮಧ್ಯಂತರ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ಅದರ ಆಧಾರದ ಮೇಲೆ ದತ್ತಾಂಶ ಸಂಗ್ರಹಿಸಲು ಹೊಸದಾಗಿ ಪರಿಶಿಷ್ಟ ಜಾತಿ ಸಮೀಕ್ಷೆ ನಡೆಸಲು ಸರ್ಕಾರ ಮುಂದಾಗಿದೆ ಎಂದು ಹೇಳಿದರು.

ಮೇ 5 ರಿಂದ 17ರ ವರೆಗೆ ಮನೆ ಮನೆ ಸಮೀಕ್ಷೆ, ಮೇ 19 ರಿಂದ 21ರ ವರೆಗೆ ಮತಗಟ್ಟೆ ವಿಶೇಷ ಸಮೀಕ್ಷೆ, ಮೇ 19 ರಿಂದ 23ರ ವರೆಗೆ ಆನ್‌ಲೈನ್ ಮೂಲಕ ಸ್ವಯಂ ಘೋಷಣೆ ಸಮೀಕ್ಷೆ ನಡೆಯಲಿದೆ. ಮೇ 5 ರಿಂದ ಮಾದಿಗ ಜನಾಂಗದ ಗಣತಿ ಆರಂಭವಾಗಿದೆ. ಆದ್ದರಿಂದ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಕ್ರಮ ಸಂಖ್ಯೆ 61ರ ಅಡಿಯಲ್ಲಿ ನಿಮ್ಮ ಜಾತಿ ಮಾದಿಗ ಎಂದು ಬರೆಸಿ.

ಈ ಪರೀಕ್ಷೆಯಲ್ಲಿ ಹೋರಾಟಗಾರರು ಸಂಪೂರ್ಣವಾಗಿ ನಿಗಾವಹಿಸಿ ಮಾದಿಗರ ಪರೀಕ್ಷೆಯಲ್ಲಿ ಗೆಲ್ಲಬೇಕು. ಇದರ ಅಂಗವಾಗಿ ಜಿಲ್ಲೆ ತಾಲ್ಲೂಕು ಹಾಗೂ ಹೋಬಳಿ, ಬೂತ್ ಮಟ್ಟದಲ್ಲಿ ಜನಗಣತಿ ಸಮೀಕ್ಷೆಗೆ ಬಂದಾಗ ಸಂಪೂರ್ಣ ನಿಗಾವಹಿಸಿ ಮಾದಿಗ ಎಂದು ಕೋರಿದರು.

ಸುದ್ದಿಗೋಷ್ಟಿಯಲ್ಲಿ ಮಹಾಸಭಾ ವೇದಿಕೆ ಪ್ರಧಾನ ಕಾರ್ಯದರ್ಶಿ ಮಹೇಶ್, ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್. ವಸಂತಕುಮಾರ್, ಅರಸೀಕೆರೆ ಅಧ್ಯಕ್ಷ ಚಂದ್ರಪ್ಪ ಮಾಡಾಳು, ಶ್ರೀನಿವಾಸ್, ಅರಸಪ್ಪ ಇದ್ದರು.


# ಬುಲೆಟ್ ತಡೆಯಬಲ್ಲ ಗ್ರಾಫೇನ್ ಆಕಾಶಕ್ಕೆ ಏಣಿ ಹಾಕಬಹುದು

- ಡಾ. ಡಿ.ಎಂ. ಸಾಗರ್

ಜಮ್ಮು ಮತ್ತು ಕಾಶ್ಮೀರದ ಪಹಲ್ಗಾವ್‌ನಲ್ಲಿ ಉಗ್ರರ ಕೃತ್ಯದಿಂದಾಗಿ 26 ಅಮಾಯಕರು ಪ್ರಾಣ ಕಳೆದುಕೊಳ್ಳುವಂತಾಯಿತು. ಭಯೋತ್ಪಾದಕರ ಹಾರಿಸಿದ ಗುಂಡು ಕ್ಷಣಾರ್ಧದಲ್ಲಿ ಪ್ರಾಣ ತೆಗೆದಿತ್ತು. ಆದರೆ, ಈ ಗುಂಡು ಚರ್ಮಕ್ಕೆ ಸೋಕುತ್ತಿದ್ದಂತೆ ತನ್ನ ಶಕ್ತಿಯನ್ನೆಲ್ಲಾ ಕಳೆದುಕೊಳ್ಳುವಂತಿದ್ದರೆ? ದುರದೃಷ್ಟವಶಾತ್ ಮನುಜ ಸೇರಿದಂತೆ ಯಾವ ಪ್ರಾಣಿಗೂ ಇಂಥ ಗುಣವಿಲ್ಲ. ಆದರೆ, ಗ್ರಾಫೇನ್ ಎಂಬ ವಸ್ತುವಿಗಿದೆ. ಇದನ್ನೇ ಬಳಸಿ ಬುಲೆಟ್ ಪ್ರೂಫ್ ವೆಸ್ಟ್ ತಯಾರಿಕೆಯಲ್ಲದೆ, ಆಕಾಶಕ್ಕೇ ಏಣಿ ಹಾಕುವಂಥ ಪ್ರಯೋಗಗಳಾಗುತ್ತಿವೆ.

ಕಾಶ್ಮೀರದ ಪಹಲ್ಗಾವ್‌ನಲ್ಲಿ ಮುಗ್ಧ ಪ್ರವಾಸಿಗರನ್ನು ರಣಹೇಡಿ ಭಯೋತ್ಪಾದಕರು ವಿನಾಕಾರಣ ಶೂಟ್ ಮಾಡಿದರು. ದೇಶವೇ ಶೋಕದಲ್ಲಿ ಪ್ರತೀಕಾರದಲ್ಲಿ ಹಾಗೂ ಪಶ್ಚಾತ್ತಾಪದಲ್ಲಿ ನಲುಗಿತು. ಬಿ.ಬಿ.ಸಿ ಪ್ರಕಾರ ಅಮೆರಿಕಾದಲ್ಲಿ 2024ರಲ್ಲಿಯೇ 488ಕ್ಕೂ ಹೆಚ್ಚು ಮಾಸ್ ಶೂಟಿಂಗ್‌ಗಳು ನಡೆದಿವೆ. ಮುಗ್ಧ ಜನ ತಮ್ಮ ಪ್ರೀತಿ ಪಾತ್ರರನ್ನು, ಕುಟುಂಬದವರನ್ನೂ ಹಾಗೂ ಸ್ನೇಹಿತರನ್ನೂ ಕಳೆದುಕೊಂಡಿದ್ದಾರೆ.

ಒಂದು ಕ್ಷಣ ಊಹಿಸಿಕೊಳ್ಳಿ. ಬಂದೂಕಿನಿಂದ ಹೋರಾಟ ಯಮಸದೃಶ ಗುಂಡಿನ ಚಲನ-ಶಕ್ತಿ ಮನುಷ್ಯರ ಚರ್ಮ ಸೋಕಿದ ಕೂಡಲೇ ಒಳಗೆ ಹೋಗುವ ಮೊದಲೇ ಚರ್ಮದ ಮೇಲ್ಮೈ ಮೇಲೆಯೇ ಹಂಚಿ ಹೋಗಿ ತನ್ನ ವೇಗವನ್ನೆಲ್ಲಾ ಕಳೆದುಕೊಂಡರೆ ಏನಾಗಬಹುದು. ಅದು ಸಾವನ್ನು ಹೊಸ್ತಿಲ ಹೊರಗೇ ನಿಲ್ಲಿಸಿ ಒದ್ದು ಹೊರಹಾಕಿದಂತೆ. ಅಂಥದ್ದೊಂದು ಗುಣ ಮನುಷ್ಯನ ಚರ್ಮಕ್ಕೆ ಮಾತ್ರವಲ್ಲ ಬಹುಶಃ ಯಾವ ಪ್ರಾಣಿಯ ಚರ್ಮಕ್ಕೂ ಇಲ್ಲ. ಅದು ಇರುವುದು ಗ್ರಾಫೇನ್ ಎನ್ನುವ ಮೂಲತಃ ಕಾರ್ಬನ್‌ನಿಂದ ತಯಾರಾದ ತೆಳ್ಳಗಿನ ಜೇನುಗೂಡಿನ ಆಕಾರದ ವಸ್ತುವಿಗೆ!



ಗ್ರಾಫೇನ್‌ನ ಬುಲೆಟ್ ತಡೆಯುವ ಸಾಮರ್ಥ್ಯದ ಪ್ರಯೋಗಕ್ಕೆ ಮಾನದಂಡವೇನು ಎಂಬ ಪ್ರಶ್ನೆಗೆ ಉತ್ತರ ಸರಳವಾಗಿದೆ. ಬಂದೂಕಿನಿಂದ ಚಿಮ್ಮಿದ ಗುಂಡು ಆ ವಸ್ತುವನ್ನು ತಾಕಿದರೆ ಅದು ಸ್ಪಷ್ಟವಾದ ರಂಧ್ರವನ್ನು ಉಂಟುಮಾಡಬಾರದು. ಹಾಗೆ ಸ್ಪಷ್ಟ ರಂಧ್ರ ಉಂಟಾಗಿದ್ದರೆ ಆ ಗುಂಡು ಆ ವಸ್ತುವಿನ ಮೂಲಕ ಹೆಚ್ಚು ಶಕ್ತಿಪಾತವಾಗದಂತೆ ತೂರಿ ಹೋಗಿದೆ ಎಂದೇ ಅರ್ಥ. ಹಾಗೆ ತೂರಿಹೋದ ಗುಂಡು ಜೀವವನ್ನು ಬಲಿಪಡೆದಿರುತ್ತದೆ. ಸಮರ್ಥವಾಗಿ ಗುಂಡು ತಡೆದುಕೊಳ್ಳುವ ವಸ್ತು ನಿರ್ದಿಷ್ಟ ಸ್ಥಳದಲ್ಲಿ ಸ್ಪಷ್ಟವಾದ ರಂಧ್ರ ಉಂಟುಮಾಡದೇ ಆ ವಸ್ತುವನ್ನು ಮುರಿಯಬೇಕು. ಹಾಗೆ ಮುರಿದ ವಸ್ತುವಿನಲ್ಲಿ ಇಂಪ್ಯಾಕ್ಟ್ ಒಂದೇ ಬಿಂದುವಿನಲ್ಲಿ ಶೇಖರಣೆಯಾಗದೆ ಸುತ್ತಲಿನ ಜಾಗದಲ್ಲಿ ಸಮಾನವಾಗಿ ಹಂಚಿಕೆಯಾಗಬೇಕು!

ಅಂಥದ್ದೊಂದು ಪ್ರಯೋಗವನ್ನು ರೈಸ್ ಲ್ಯಾಬ್ ಅರ್ಥಾತ್ ಅಮೆರಿಕಾದ ರೈಸ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಹಾಗೂ ಸಂಶೋಧಕ ಥಾಮಸ್ ಹಾಗೂ ತಂಡ ಕೈಗೊಂಡಿತು. ಲೇಸರ್ ಉಪಯೋಗಿಸಿ ಬುಲೆಟ್ ಅನ್ನು ಹೋಲುವ ಮೈಕ್ರೋಬುಲೆಟ್ ಅನ್ನು ಹತ್ತರಿಂದ ನೂರು ನ್ಯಾನೋಮೀಟರ್ ದಪ್ಪದ ಬಹು ಪದರಗಳ ಗ್ರಾಫೇನ್ ಹಾಳೆಗಳ ಮೇಲೆ ಪ್ರಯೋಗಿಸಲಾಯಿತು. ಅಂತಹ ಮೈಕ್ರೊಬುಲೆಟ್‌ನ ವೇಗ ಸೆಕೆಂಡಿಗೆ ಮೂರು ಕಿಲೋಮೀಟರ್! ಅಂದರೆ ಎಕೆ 47ನಿಂದ ಚಿಮ್ಮಿದ ಬುಲೆಟ್‌ಗಿಂತ ನಾಲ್ಕು ಪಟ್ಟು ಹೆಚ್ಚು ವೇಗ!

ಪ್ರಯೋಗದ ಫಲಿತಾಂಶ ಉತ್ತೇಜಕವೂ ಆಶ್ಚರ್ಯಕಾರಕವೂ ಆಗಿತ್ತು. ಸೆಕೆಂಡಿಗೆ ಮೂರು ಕಿಲೋ ಮೀಟರ್ ವೇಗದಿಂದ ಬಂದ ಬುಲೆಟ್ ಗ್ರಾಫೇನ್ ಪದರಗಳ ಮೇಲೆ ಸ್ಪಷ್ಟವಾದ ರಂಧ್ರಮಾಡಿ ಹಾದು ಹೋಗಿರಲಿಲ್ಲ! ಬದಲಿಗೆ, ಫ್ರಾಕ್ಚರ್‌ನ ಹಾಗೆ ಅತೀ ಒತ್ತಡದಿಂದ ಬೈಸಿಕಲ್ ಟ್ಯೂಬ್ ಪಂಚರ್ ಆದ ಹಾಗೆ ಯಾದೃಚ್ಛಿಕವಾಗಿ ಒಡೆದಿತ್ತು.

ಇದರ ಅರ್ಥವೇನು? ಸ್ಪಷ್ಟ ರಂಧ್ರವಾಗಿದ್ದರೆ ಬುಲೆಟ್ ಹೆಚ್ಚಿನ ಚಲನಶಕ್ತಿಯನ್ನು ಕಳೆದುಕೊಳ್ಳದೇ ತೂರಿ ಹೋಗಿದೆ. ರಂಧ್ರ ಅಸ್ಪಷ್ಟವಾಗಿ ಬುಲೆಟ್‌ಗಿಂತ ಹಲವು ಪಟ್ಟು ದೊಡ್ಡ ಬಿರುಕು ಮೂಡಿದ್ದರೆ ಅದರ ಅರ್ಥ ಬುಲೆಟ್ ತನ್ನ ಬಹುವಂಶದ ಚಲನಶಕ್ತಿಯನ್ನು ಗ್ರಾಫೇನ್ ಹಾಳೆಗಳ ಮೇಲೆಯೇ ಕಳೆದುಕೊಂಡಿದೆ ಹಾಗೂ ಪ್ರಾಣಾಪಾಯದ ಸಾಧ್ಯತೆ ಕಡಿಮೆಯಾದಂತೆ!

ಇಂಥದ್ದೇ ಪ್ರಯೋಗವನ್ನು ಇತರೆ ವಸ್ತುಗಳ ಮೇಲೂ ಮಾಡಿದಾಗ ಅಲ್ಲಿ ಸ್ಪಷ್ಟವಾದ ಬುಲೆಟ್ ರಂಧ್ರಗಳು ಮೂಡಿದವು. ವಿಜ್ಞಾನಿಗಳು ಕಂಡುಕೊಂಡ ಆಸಕ್ತಿಕರ ವಿಷಯ ಏನೆಂದರೆ ಟಿಹೊಡೆತಟಿ (ಅರ್ಥಾತ್ ಬುಲೆಟ್ ನ ಹೊಡೆತ) ತಾಳಿಕೊಳ್ಳುವ ಗುಣ ಗ್ರಾಫೇನ್‌ನಲ್ಲಿದೆ. ಗ್ರಾಫೇನ್ ಬುಲೆಟ್ ಪ್ರೂಫ್ ವೆಸ್ಟ್‌ಗಳು ಇನ್ನೂ ಮಾರುಕಟ್ಟೆಯಲ್ಲಿ ಲಭ್ಯವಿಲ್ಲ. ತಾಂತ್ರಿಕವಾಗಿ ಕ್ರಮಿಸಬೇಕಾದ ದೂರ ಇನ್ನೂ ಇದೆ, ಬಗೆಹರಿಸಬೇಕಾದ ವೈಜ್ಞಾನಿಕ ಸಮಸ್ಯೆಗಳು ಅನೇಕವಿವೆ.

ಇಂಪ್ಯಾಕ್ಟ್ ಅನ್ನು, ಅರ್ಥಾತ್ ಬುಲೆಟ್‌ನ ವೇಗೋತ್ಕರ್ಷವನ್ನು ತಡೆದುಕೊಳ್ಳುವ ಗ್ರಾಫೇನ್‌ನ ಸಾಮರ್ಥ್ಯದ ಕುರಿತು ಅನೇಕ ಸಂಶೋಧನೆಗಳು ನಡೆದಿವೆ. ಇದರ ಸಾಮರ್ಥ್ಯದ ಸಾಧ್ಯತೆಯ ಕುರಿತು ಭವಿಷ್ಯದ ಭರವಸೆ ಇದೆಯಾದರೂ ಇದು ಇನ್ನೂ ಪ್ರಾಯೋಗಿಕ ಹಂತದಲ್ಲಿಯೇ ಇದೆ. ಬುಲೆಟ್ ಪ್ರೂಫ್ ವೆಸ್ಟ್ ಅಥವಾ ಗುಂಡು ನಿರೋಧಕ ಕವಚ ರಕ್ಷಣೆ ನೀಡುವುದರ ಜೊತೆಗೆ ಅದರ ಭಾರ, ಸಾಗಣೆಯ ಹಾಗೂ ಧರಿಸುವ ಅನುಕೂಲತೆ, ಬೆಲೆ ಹಾಗೂ ತಂತ್ರಜ್ಞಾನದ ಸಾಧ್ಯತೆ ಇತ್ಯಾದಿ ಕಾರ್ಯಸಾಧುತ್ವದ ಕುರಿತು ಗಮನಿಸುವುದು ಅತ್ಯಗತ್ಯ.

ಸಾಂಪ್ರದಾಯಿಕ ಶತ್ರು ರಾಷ್ಟ್ರಗಳಾದ ಭಾರತ ಹಾಗೂ ಪಾಕಿಸ್ತಾನ ಕೂಡಾ ಗ್ರಾಫೇನ್ ಉಪಯೋಗಿಸಿ ಗುಂಡು-ನಿರೋಧಕ ಕವಚ ತಯಾರಿಸುವ ಕುರಿತು ಮೂಲಭೂತ ಹಾಗೂ ಅನ್ವಯಿಕ ಸಂಶೋಧನೆಗಳನ್ನು ಕೈಗೊಂಡಿವೆ. ಭಾರತದ ರಕ್ಷಣಾ ಸಂಸ್ಥೆಯಾದ ಗ್ರಾಫೇನ್ ಆಧಾರಿತವಾದ ಅನೇಕ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುತ್ತಿವೆ.

## ಹೊಯ್ಸಳರ ನೆನಪುಗಳು ಸರಣಿ-4



ಅಜ್ಞಾತವಾಗಿ ಉಳಿದಿರುವ ಹೊಯ್ಸಳ ಕಾಲದ ಮಹಾಶಿಲ್ಪಿ ಮಸಣಿ ತಮ್ಮ ನೀಡಿರುವ ಸೋಮನಾಥಪುರ ಕೇಶವ ದೇವಾಲಯದಲ್ಲಿ ಮಸಣಿ ತಮ್ಮ ಕೈ ಚಳಕದಿಂದ ಮೂಡಿರುವ ಕಲಾಕೃತಿ. ಶ್ರೀ ಲಕ್ಷ್ಮೀ ನಾರಾಯಣ (ಎಡ ಕೈನಲ್ಲಿ ಗದೆ ಉಳಿದ ಕೈಗಳು ಹಾನಿಯಾಗಿದೆ, ಎಡ ತೊಡೆಯ ಮೇಲೆ ಗಂಭೀರ ವಧನೆ ಶ್ರೀ ಲಕ್ಷ್ಮೀ. ಕೆಳಭಾಗ, ಆನೆ, ಬಲ ಪಕ್ಕ ಕುಳಿತಿರುವ ಗರುಡ

ಎಡಭಾಗದಲ್ಲಿ ದೇವಿ) ಹಾಗೂ ಮೂಡಿಸಿರುವ ಶಿಲ್ಪಿಯ ಹೆಸರು/ಹಸ್ತಾಕ್ಷರ ಮಸಣಿ ತಮ್ಮ ಶ್ರೀ ಕೇಶವ ದೇವಾಲಯ ಸೋಮನಾಥಪುರ.

- ಡಾ. ಎನ್. ರಮೇಶ್, ಹಾಸನ

## ಮೇ 23ಕ್ಕೆ ಕುಲದಲ್ಲಿ ಕೀಳ್ಯಾವುದೋ ಸಿನಿಮಾ ತೆರೆಗೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್




ಹಾಸನ: ಕುಲದಲ್ಲಿ ಕೀಳ್ಯಾವುದೋ ಸಿನಿಮಾ ಮೇ 23 ರಿಂದ ರಾಜ್ಯದ 120 ಚಿತ್ರ ಮಂದಿರಗಳಲ್ಲಿ ತೆರೆ ಕಾಣಲಿದೆ ಎಂದು ಚಿತ್ರದ ನಾಯಕ ನಟ ಮನು ಮಡೆನೂರು ಹೇಳಿದರು.

ಸುದ್ದಿಗೋಷ್ಟಿಯಲ್ಲಿ ಮಾತನಾಡಿ, ನಿರ್ದೇಶಕ ಯೋಗರಾಜ್ ಸಿನಿಮಾಸ್ ಬ್ಯಾನರ್ ಅಡಿಯಲ್ಲಿ ಚಿತ್ರ ನಿರ್ಮಾಣವಾಗಿದೆ. ಕೆ.ರಾಮ್ ನಾರಾಯಣ್ ನಿರ್ದೇಶನದಲ್ಲಿ ಸಿನಿಮಾ ಮೂಡಿ ಬಂದಿದ್ದು ಎ.ಕೆ. ಸಂತೋಷ್ ಕುಮಾರ್ ಮತ್ತು ವಿದ್ಯ ಅವರ ಸಂಭಾಷಣೆ ಇದೆ. ಚಿತ್ರದಲ್ಲಿ ಒಟ್ಟು ಐದು ಹಾಡುಗಳಿವೆ. ಜಯಂತ್ ಕಾಯ್ಕಿಣಿ, ಕೆ.ರಾಮ್ ನಾರಾಯಣ್, ಯೋಗರಾಜ್ ಭಟ್ ಸಾಹಿತ್ಯ ರಚನೆ ಮಾಡಿದ್ದು, ಮನೋಮೂರ್ತಿ ಸಂಗೀತ ಸಂಯೋಜನೆ ಮಾಡಿದ್ದಾರೆ ಎಂದರು.

## ಮೇ 31 ರಿಂದ ಮೂರು ದಿನ ಎಂಎಸ್‌ಎಂಇ ಸಮಾವೇಶ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಬೆಂಗಳೂರಿನ ಅರಮನೆ ಮೈದಾನದಲ್ಲಿ ಮೇ 31 ರಿಂದ ಜೂನ್ 1ರ ವರೆಗೆ ಹಮ್ಮಿಕೊಂಡಿರುವ ಎಂಎಸ್ ಎಂಇ (ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ) ಸಮಾವೇಶ ಹಿನ್ನೆಲೆಯಲ್ಲಿ ಹಾಸನದಲ್ಲಿ ಪೂರ್ವಭಾವಿ ಸಭೆ ನಡೆಸಲಾಯಿತು.

FKCCI, KASSIA ಮತ್ತು ಪೀಣ್ಯ ಕೈಗಾರಿಕಾ ಸಂಘದ ನಿಯೋಗ ಇತ್ತೀಚೆಗೆ ಹಾಸನಕ್ಕೆ ಭೇಟಿಯಾಗಿ ಮಧ್ಯಮ ಮತ್ತು ಸಣ್ಣ ಪ್ರಮಾಣದ ಕೈಗಾರಿಕಾ ಸಂಸ್ಥೆ, ಉದ್ಯಮಿ ಹಾಗು ಜಿಲ್ಲಾ ಕೈಗಾರಿಕಾ ಕೇಂದ್ರದದ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದರು.

ಎಫ್‌ಕೆಸಿಸಿಐ ನಿರ್ದೇಶಕ ಹೆಚ್.ಎ. ಕಿರಣ್ ಮಾತನಾಡಿ, ಇತಿಹಾಸದಲ್ಲಿ ಮೊದಲ ಬಾರಿಗೆ ಕಾರ್ಯಕ್ರಮ ಆಯೋಜಿಸಲು ಎಫ್‌ಕೆಸಿಸಿಐ, ಕೆಎಸ್‌ಐಎ ಮತ್ತು ಪಿಐಎ ಒಟ್ಟಾಗಿವೆ. ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳಿಗೆ ನೆರವಾಗಲು ಈ ಸಮಾವೇಶ ಹಮ್ಮಿಕೊಳ್ಳಲಾಗುತ್ತಿದೆ. ಮಹಿಳೆಯರು ಮತ್ತು ಎಸ್‌ಸಿ, ಎಸ್‌ಟಿ ಉದ್ಯಮಿಗಳಿಗೆ ಶೇ. 100, ಸಾಮಾನ್ಯ ಉದ್ಯಮಿಗಳಿಗೆ ಶೇ. 80ರ ಸಹಾಯಧನದಡಿ 280 ಮಳಿಗೆಗಳನ್ನು ನೀಡಲಾಗುತ್ತಿದೆ ಎಂದರು.




ಈ ಸಮಾವೇಶವು ಇಂಜಿನಿಯರಿಂಗ್ ಮತ್ತು ಉತ್ಪಾದನೆಯ ಮೇಲೆ ಪ್ರಮುಖ ಗಮನ ಹರಿಸಲಿದೆ. ಜಿಲ್ಲೆಯ ಉದ್ಯಮಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ತಿಳಿಸಿದರು.

FKCCI ಅಧ್ಯಕ್ಷ ಸತೀಶ್ ಚಲ್ಕರೆ ಮಾತನಾಡಿ, ಕೇಂದ್ರ ಮತ್ತು ಕರ್ನಾಟಕ ಸರ್ಕಾರದ ಸಹಯೋಗದಲ್ಲಿ ಮೇ 30 ರಿಂದ ಜೂನ್ 1ರ ವರೆಗೆ ಅರಮನೆ ಮೈದಾನದಲ್ಲಿ ಸಮಾವೇಶ ಏರ್ಪಡಿಸಲಾಗಿದೆ ಎಂದರು.

FKCCI ನಿರ್ದೇಶಕರಾದ ರಂಗಸ್ವಾಮಿ, ಕೆ.ಎಂ. ಶಿವಮೂರ್ತಿ, ಕಾರ್ಯದರ್ಶಿ ಸುದರ್ಶನ್, ಹೆಚ್. ಆರ್. ಮದನ್ ಕುಮಾರ್, ಪ್ರಕಾಶ್ ಎಸ್. ಯಾಜಿ ಇತರರಿದ್ದರು.

## ಇತಿಹಾಸದಲ್ಲಿ ಈ ದಿನ

### ಮೇ -10

1857: ಭಾರತದ ಪ್ರಥಮ ಸ್ವಾತಂತ್ರ್ಯ ಸಮರವಾದ ಸಿಪಾಯಿಗಳ ಬಂಡಾಯ (First War of Indian Independence) ಮೆರುಟ್‌ನಲ್ಲಿ ಆರಂಭವಾಯಿತು.

1872: ವಿಕ್ಟೋರಿಯಾ ವುಡ್‌ಹಲ್ ಅಮೆರಿಕ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆ ಮಾಡಿದ ಮೊದಲ ಮಹಿಳೆ ಆದರು.

1924: ಎಫ್‌ಬಿಐನ ಪ್ರಮುಖ ನಿರ್ದೇಶಕನಾಗಿ ಜೆ. ಎಡ್ಗರ್ ಹೂವರ್ ನೇಮಕಗೊಂಡರು.

1994: ನೇಲ್ಸನ್ ಮಂಡೇಲಾ ದಕ್ಷಿಣ ಆಫ್ರಿಕಾದ ಮೊದಲ ಕಪ್ಪು ಅಧ್ಯಕ್ಷರಾಗಿ ಔಪಚಾರಿಕವಾಗಿ ಪದಗ್ರಹಣ ಮಾಡಿದರು.

**ಜನನ**

1899: ಫ್ರೆಡ್ ಅಸ್ಟೇರ್, ಪ್ರಸಿದ್ಧ ಅಮೆರಿಕನ್ ನಟ, ನೃತ್ಯಗಾರ.

1909: ಮನೋಜ್ ಮೋಹನ್ ಝೂರಿ, ಭಾರತೀಯ ಸ್ವಾತಂತ್ರ್ಯ ಹೋರಾಟಗಾರ ಮತ್ತು ಲೇಖಕ.

1957: ಸಿದ್ಧಾರ್ಥ ಬಸು, ಭಾರತೀಯ ಟೆಲಿವಿಷನ್ ನಿರ್ಮಾಪಕ, ಕೌನ್ ಬನೇಗಾ ಕರೋಡ್‌ಪತಿ ಕಾರ್ಯಕ್ರಮದ ಮಾದರಿ ರೂಪಕ.

**ಮರಣ**

1774: ಲೂಯಿ , ಫ್ರಾನ್ಸ್‌ನ ರಾಜ.

2000: ಜುಲಿ ಪಾರ್ಟನ್, ಖ್ಯಾತ ಬ್ರಿಟಿಷ್ ನಟಿ.




Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248